ಮಾರುತಿ ದೇವರ ರಥೋತ್ಸವ ಕಾರ್ಯಕ್ರಮ ಇತ್ತು. ಈ ರಥೋತ್ಸವ ಮೆರವಣಿಗೆಯಲ್ಲಿ ಸುಮಾರು 10 ಸಾವಿರ ಜನ ಪಾಲ್ಗೊಂಡಿದ್ದರು. ಈ ಕಾರ್ಯಕ್ರಮ ಮುಗಿಯುತ್ತಾ ಬರುವಾಗ, ಸುಮಾರು 6-45 ಗಂಟೆ ಸಮಯದಲ್ಲಿ, ಡಾ॥ ಅಶ್ವತ್ ಬ್ರಹ್ಮಾವರ್ ಅವರ ಮನೆಯ ಕಡೆಯಿಂದ, ಮೆರವಣಿಗೆಯ ಮೇಲೆ ಕಲ್ಲು ತೂರಲ್ಪಟ್ಟವು. ಇದರಿಂದ ಸಿಟ್ಟಿಗೆದ್ದ ಮೆರವಣಿಗೆಯಲ್ಲಿದ್ದ ಕೆಲವು ಯುವಕರು, ಡಾ॥ ಅಶ್ವತ್ ಬ್ರಹ್ಮಾವರ್ ಅವರ ಮನೆಗೆ ಕಲ್ಲು ತೂರಿದರು ಮತ್ತು ಗ್ಲಾಸ್‌ಗಳನ್ನು ಹೊಡೆದರು. ಅಲ್ಲದೆ ಮುಂದೆ ಅವರು ಬಸ್ತಿ ಮಸೀದಿಯ ಹತ್ತಿರ ನಿಲ್ಲಿಸಿರತಕ್ಕ ಕಾರುಗಳಿಗೂ ಕಲ್ಲು ತೂರಿ ಜಖಂಗೊಳಿಸಿದರು. ಹಾಗೂ ಮಸೀದಿಗೂ ಕಲ್ಲು ತೂರಿದರು. ನಂತರ ಇರಿಯುವುದು, ಲೂಟಿ, ಬೆಂಕಿ ಹಚ್ಚುವಿಕೆ ಇತ್ಯಾದಿ ಕಾನೂನುಬಾಹಿರ ಚಟುವಟಿಕೆಗಳು ಪ್ರಾರಂಭವಾದವು. ಅದೇ ದಿನ ರಾತ್ರಿ 11 ಗಂಟೆಗೆ ಒಂದು ಕೆ.ಎಸ್.ಆರ್.ಟಿ.ಸಿ. ಬಸ್ಸಿಗೆ ಕಲ್ಲು ತೂರಿ ಜಖಂಗೊಳಿಸಿದರು. ರಾತ್ರಿ 11-45 ಗಂಟೆಗೆ ಸಕ್ರಪ್ಪ ಎಂಬುವರಿಗೆ ಆಟೋದಲ್ಲಿ ಮನೆಗೆ ಹೋಗುವಾಗ, ಅಬ್ಬರಿ ಎಂಬಲ್ಲಿ ಆಟೋ ನಿಲ್ಲಿಸಿ, ಚೂರಿಯಿಂದ ತಿವಿದು ಗಾಯಗೊಳಿಸಿರುತ್ತಾರೆ. ಅದೇ ಸಮಯಕ್ಕೆ ಕೆಲವು ಜನ ಗುಂಪುಗೂಡಿಕೊಂಡು, ಮಾರಕ ಅಸ್ತ್ರಗಳನ್ನು ಹಿಡಿದು, ಒಬ್ಬನ ಮನೆಯ ಮೇಲೆ ಕಲ್ಲು ತೂರಿ, ಭತ್ತದ ಗುಡಾಣಕ್ಕೆ ಬೆಂಕಿ ಹಚ್ಚಿ, ಒಬ್ಬರಿಗೆ ಚಾಕುವಿನಿಂದ ಗಾಯಗೊಳಿಸಿರುತ್ತಾರೆ. ಅದೇ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17ರಲ್ಲಿ ನಾಗಪ್ಪ ಗೋವಿಂದ ಮುಗೇರ್ ಎಂಬುವರಿಗೆ ಕಬ್ಬಿಣದ ಸಲಾಖೆಯಿಂದ ಹೊಡೆದು ಗಾಯಗೊಳಿಸಿರುತ್ತಾರೆ. ಅಲ್ಲದೆ 24 ಗಂಟೆ ಸಮಯದಲ್ಲಿ ಮಹಮದ್ ಸಾದಿಕ್ ಆಲಿ ಸಾಹೇಬ್ ಎಂಬುವರು ತನ್ನ ಆಟೋದಲ್ಲಿ ಪುಷ್ಪಾಂಜಲಿ ಥಿಯೇಟರ್ ಹತ್ತಿರ ಹೋಗುವಾಗ ಕೆಲವು ಗಲಭೆಕೋರರು, ಸದರಿ ಆಟೋವನ್ನು ಎಸ್.ಬಿ.ಐ.ಭಟ್ಕಳದ ಹತ್ತಿರ ನಿಲ್ಲಿಸಿ ಜಖಂಗೊಳಿಸಿದರು. ದಿನಾಂಕಃ 1-4-93ರ ರಾತ್ರಿ 11 ಗಂಟೆ ಸಮಯದಲ್ಲಿ ನಸಾಭಾಗ್ ಕೂಲ್‌ಡ್ರಿಂಕ್ಸ್ ಅಂಗಡಿಯ ಹತ್ತಿರ 10-15 ಜನರ ಗುಂಪು, ಸುನಿಲ್ ಮತ್ತು ಅವರ ಸಹೋದರರ ಮೇಲೆ ಹಲ್ಲೆ ನಡೆಸಿದರು. ಅದೇ ರಾತ್ರಿ 11 ಗಂಟೆ ಸಮಯದಲ್ಲಿ ಗುಂಪೊಂದು ಶ್ರೀ ನಾಗೇಶ್ ಸಂಗಯ್ಯ ನಾಯಕ್ ಚೌತಾನಿ ಎಂಬುವರ ಮನೆಗೆ ಮುತ್ತಿಗೆ ಹಾಕಿ, ಕಿಟಕಿ ಗ್ಲಾಸುಗಳನ್ನು ಹೊಡೆದು, 12 ಸಾವಿರ ರೂಪಾಯಿಗಳಷ್ಟು ನಷ್ಟ ಉಂಟು ಮಾಡಿದರು. ದಿನಾಂಕಃ 2-4-93ರಂದು ರಾತ್ರಿ 12-15ರಲ್ಲಿ ನಾಗರಾಜ ಮಲಗಪ್ಪ ನಾಯಕ ಎಂಬುವರು ಸಿನಿಮಾ ನೋಡಿ ಮನೆಗೆ ಬರುವಾಗ, ಕೆಲವರು ಗುಂಪುಗೂಡಿ, ಕತ್ತಿ ಮತ್ತು ಚಾಕುವಿನಿಂದ ಇರಿದು ಗಾಯಗೊಳಿಸಿರುತ್ತಾರೆ. ಅದೇ ಸಮಯದಲ್ಲಿ ಮುಂಡಳ್ಳಿ ಎಂಬಲ್ಲಿ ಕುಪ್ಪ ಮುಗೇರ ಎಂಬುವನು ತನ್ನ ಸಂಗಡಿಗರೊಂದಿಗೆ ಮೀನು ಹಿಡಿಯಲು ಹೋದಾಗ, ಕೆಲವರು ಗುಂಪುಗೂಡಿಕೊಂಡು ಹಲ್ಲೆ ನಡೆಸಿ ಗಾಯಗೊಳಿಸಿರುತ್ತಾರೆ. ರಾತ್ರಿ ಎರಡೂವರೆ ಗಂಟೆ ಸಮಯದಲ್ಲಿ ಹೆಚ್.ಡಿ. ಕಾಲೋನಿ, ಎ.ಜಿ. ಶಾಸ್ತ್ರಿ ಎಂಬುವರ ಮೋಟಾರು ಸೈಕಲ್ ಸ್ಪ್ಲಾಂಡನ್ನು ಕೆಲವು ದುಷ್ಕರ್ಮಿಗಳು ನಾಶಪಡಿಸಿ, 1 ಸಾವಿರ ರೂಪಾಯಿಗಳಷ್ಟು ನಷ್ಟ ಮಾಡಿರುತ್ತಾರೆ. ರಾತ್ರಿ 12-30 ಗಂಟೆ ಸಮಯದಲ್ಲಿ ಹರೀಶ್‌ರಾಮದಾಸ್‌ಸೇಟ್, ಕಿಡ್ನಾಯ್ ರೋಡ್, ಇವರ ಆಟೋಗೆ ಬೆಂಕಿ ಹಚ್ಚಿ 30 ಸಾವಿರ ರೂಪಾಯಿ ನಷ್ಟ ಮಾಡಿರುತ್ತಾರೆ. ಅದೇ ಸಮಯದಲ್ಲಿ ಶ್ರೀ ಸಂದೀಪ್ ಗಣೇಶ್ ಸೇಟ್, ಕಿಡ್ನಾಯಿ ರೋಡ್, ಇವರ ಮನೆಯ ಹತ್ತಿರ ಇರತಕ್ಕ ಟೆಲಿಫೋನ್ ಬೂತಿಗೆ ಬೆಂಕಿ ಹಚ್ಚಿ 5 ಸಾವಿರ ರೂಪಾಯಿನಷ್ಟು ನಷ್ಟ ಉಂಟುಮಾಡಿರುತ್ತಾರೆ. ಮೇಲ್ಕಂಡ ಘಟನೆಗಳಿಗೆ ಸಂಬಂಧಿಸಿದಂತೆ, ಭಟ್ಕಳ್ ಪೋಲೀಸ್ ಠಾಣೆಯಲ್ಲಿ 13 ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ. ದಿನಾಂಕಃ2-4-93ರಂದು ರಾತ್ರಿ 9 ಗಂಟೆ ಸಮಯದಲ್ಲಿ ಕೆಲವು ದುಷ್ಕರ್ಮಿಗಳು ನಸ್ತಾರೆ ಗ್ರಾಮದಲ್ಲಿರತಕ್ಕ ಒಂದು ಮಸೀದಿಗೆ ಹಾನಿ ಉಂಟುಮಾಡಿರುತ್ತಾರೆ. ರಾತ್ರಿ 9-30 ಗಂಟೆ ಸಮಯದಲ್ಲಿ ಎರಡು ಮನೆಗಳಿಗೆ ಬೆಂಕಿ ಹಚ್ಚಿ ನಾಶ ಮಾಡಿರುತ್ತಾರೆ. 12 ಜನ ಸಂಶಯಾಸ್ಪದ ವ್ಯಕ್ತಿಗಳಲ್ಲಿ ಒಬ್ಬನನ್ನು ಗುರುತಿಸಿ, ವಶಪಡಿಸಿಕೊಳ್ಳಲಾಗಿದೆ. ಬೆಳ್ಳಿ ಗ್ರಾಮದಲ್ಲಿ ಕೆಲವು ದುಷ್ಕರ್ಮಿಗಳು ಒಬ್ಬ ದಂಪತಿಗಳ ಮೇಲೆ ಹಲ್ಲೆ ನಡೆಸಿ, 106

ಗಾಯಗೊಳಿಸಿರುತ್ತಾರೆ. ಗಾಯಾಳುಗಳನ್ನು ಭಟ್ಕಳ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ. ಈ ಗಲಭೆಗೆ ಸಂಬಂಧಿಸಿದಂತೆ, 33 ಜನರನ್ನು ಬಂಧಿಸಿ ಪ್ರಶ್ನಿಸುತ್ತಾ ಇದೆ. ಮಾರಕ ವಸ್ತುಗಳನ್ನು ಒಯ್ಯಲು ಬಳಸುತ್ತಿದ್ದ ಒಂದು ಆಟೋ ಮತ್ತು ಒಂದು ಸ್ಕೂಟರನ್ನು ಜಪ್ತಿ ಮಾಡಲಾಗಿದೆ. ಸಿ.ಆರ್.ಪಿ.ಸಿ. ಕಲಂ 144ರ ಪ್ರಕಾರ, ಭಟ್ಕಳದಲ್ಲಿ 5 ದಿವಸದವರೆಗೆ ನಿಷೇದಾಜ್ಞೆಯನ್ನು ಜಾರಿಗೊಳಿಸಲಾಗಿದೆ. ಪೋಲಿಸ್ ಪೆಟ್ರೋಲಿಂಗ್ ಮತ್ತು ಪಿಕೆಟಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ. ಹೆಚ್ಚಿನ ಪೋಲೀಸನ್ನು ಸ್ಥಳೀಯ ಪೋಲೀಸರ ನೆರವಿಗೆ ಕಳುಹಿಸಿಕೊಡಲಾಗಿದೆ. ಪೋಲೀಸ್ ಸೂಪರಿಂಟೆಂಡೆಂಟ್, ಕಾರ್‌ವಾರ್ ಮತ್ತು ಪೋಲಿಸ್ ಮಹಾ ನಿರ್ದೇಶಕರು, ಪಶ್ಚಿಮ ವಲಯ ಮಂಗಳೂರು ಇವರು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಹತೋಟಿಗೆ ತಂದಿರುತ್ತಾರೆ. ಹಾಲಿ ಪರಿಸ್ಥಿತಿಯು ಶಾಂತವಾಗಿದೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಇದು ಹೇಳಿಕೆ ಇದೆಯಲ್ಲ, ಈ ಬಗ್ಗೆ ಪ್ರತಿ ಸಾರಿ ನಾನು ಹೇಳುತ್ತೇನೆ. ಪೋಲೀಸ್‌ನವರು ಏನು ಬರೆದುಕೊಡುತ್ತಾರೋ ಅಷ್ಟೇ ಓದುವುದು ಇವರ ಕೆಲಸ. ಅಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಬ್ರಾಂಚ್ ಇದೆ. ಅದರ ಮೇಲೆ ಅಟ್ಯಾಕ್ ಆಗಿದೆ, ಡ್ಯಾಮೇಜ್ ಆಗಿದೆ. ಅದು ನಿಮ್ಮ ಸ್ಟೇಟ್‌ಮೆಂಟ್‌ನಲ್ಲಿ ಏಕೆ ಬಂದಿಲ್ಲ? ಅವರ ಪ್ರಕಾರ ನಾವು ಮತ್ತೊಂದು ವಿಷಯ ಹೇಳಿದ್ದೆವು. ಯಾರ ಪ್ರಾಪರ್ಟಿ ಡ್ಯಾಮೇಜ್ ಆಗಿದೆ. ಯಾರು ಇಂಜೂರ್ ಆಗಿದ್ದಾರೆ. ಅವರಿಗೆ ತಕ್ಕ ಪರಿಹಾರ ಕೊಡಬೇಕೆಂದು ಹೇಳಿದ್ದೆವು . ಅದರ ಬಗ್ಗೆ ನಿಮ್ಮದು ಏನೂ ಇಲ್ಲ. ಒಂದೂವರೆ ಸಾವಿರ ರೂಪಾಯಿ ಕೊಟ್ಟಿದ್ದಾರೆ. ಯಾರ ಆಸ್ತಿ ಡ್ಯಾಮೇಜ್ ಆಗಿದೆ, ಅವರಿಗೆ ಎಷ್ಟು ಲಾಸ್ ಆಗಿದೆ ಅಷ್ಟು ನೀವು ಪ್ರಾಪರ್ಟಿ ಲಾಸ್ ಕೊಡಬೇಕಾಗುತ್ತದೆ ಯಾರಿಗೆ ಇಂಜುರಿ ಆಗಿದೆ. ಅವರಿಗೆ ಪರಿಹಾರ ಕೊಡಬೇಕಾಗುತ್ತದೆ. ಮಣಿಪಾಲ್ ಆಸ್ಪತ್ರೆಯಲ್ಲಿ ಯಾರು ಸೀರಿಯಸ್ ಇದ್ದಾರೆ ಅವರ ಬಗ್ಗೆ ತಾವು ಏನೂ ಹೇಳಿಲ್ಲ. ಅದರ ಬಗ್ಗೆ ತಾವು ಸ್ಪಷ್ಟೀಕರಣ ನೀಡಬೇಕಾಗುತ್ತದೆ. ಮತ್ತು ಈಗತಾನೆ ನನಗೆ ಫೋನ್ ಬಂತು ಕರ್ಕಿ ಎಂಬ ನಮ್ಮ ಪಕ್ಷದ ಕಾರ್ಯಕರ್ತರು ಮೂಡಿದ್ದಾರೆ. ಈಗ ಪೋಲೀಸಿನವರು ಅಲ್ಲಿ ಪ್ರತಿಯೊಂದು ಮನೆ ಮನೆಗೂ ಹೋಗಿ ಇನೋಸೆಂಟ್ ಜನರನ್ನು ಹೊರಗೆಳೆದು ಹೊಡೆಯುವುದಕ್ಕೆ ಶುರು ಮಾಡಿದ್ದಾರೆ. ಎರಡನೆಯದು ಅಣ್ಣಪ್ಪ ಥರ್ಮಲ್ ಮೊಗೆ ಎಂಬ ಒಬ್ಬ ಬಡ ಫಿಶರ್ ಮ್ಯಾನ್ ಮನೆಯಲ್ಲಿ ಅನಾರೋಗ್ಯವಾಗಿ ಮಲಗಿದ್ದ ಅವನನ್ನು ಇವತ್ತು ವಿನಾಕಾರಣ ಪೋಲೀಸಿನವರು ಅರೆಸ್ಟ್ ಮಾಡಿಕೊಂಡು ತೆಗೆದುಕೊಂಡು ಹೋಗಿದ್ದಾರೆ. ಈ ಪ್ರಕಾರವಾಗಿ ಪೋಲೀಸಿನವರು ಬಿಹೇವ್ ಮಾಡಿದರೆ ಇವತ್ತು ಶಾಂತಿ ಬರಲಿಕ್ಕೆ ಸಾಧ್ಯ ಇಲ್ಲ. ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಿಜವಾಗಿಯೂ ಯಾರೂ ತಪ್ಪಿತಸ್ಥರಿದ್ದಾರೆ, ಯಾರು ಕಾನೂನು ಕೈಗೆ ತೆಗೆದುಕೊಂಡಿದ್ದಾರೆ ಅವರ ಮೇಲೆ ನಿಷ್ಠುರವಾದ ಕ್ರಮ ತೆಗೆದುಕೊಂಡರೆ ಜನ ನಿಮ್ಮನ್ನು ಮೆಚ್ಚಬಹುದು; ಜನರೊಡನೆ ಸಹಕರಿಸಬೇಕು. ಆದರೆ ತಾವು ಇನೋಸೆಂಟ್ ಜನರಿಗೆ ಈ ಪ್ರಕಾರ ಹೆರ್ಯಾಸ್‌ಮೆಂಟ್ ಮಾಡಲಿಕ್ಕೆ ಶುರು ಮಾಡಿದರೆ ಕಷ್ಟ ಆಗಬಹುದು. ಹಾಗಾಗಿ ಇನೋಸೆಂಟ್ ಜನರಿಗೆ ಯಾವ ತರಹ ಕಷ್ಟ ಆಗಬಾರದು. ಒಂದು ವೇಳೆ ಇನೋಸೆಂಟ್ ಜನರನ್ನು ಅರೆಸ್ಟ್ ಮಾಡಿದ್ದರೆ ತಾವು ರಿಲೀಜ್ ಮಾಡಬೇಕು ಎಂದು ನಾನು ತಮ್ಮ ಮುಖೇನ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ರೀತಿಯಲ್ಲಿ ಯಾರು ನಷ್ಟ ಕಷ್ಟಗಳನ್ನು ಅನುಭವಿಸಿದ್ದಾರೋ ಅವರಿಗೆ ಬೇರೆ ಊರುಗಳಲ್ಲಿ ಯಾವ ರೀತಿಯಾದ ಪರಿಹಾರಗಳನ್ನು ಕೊಟ್ಟಿದ್ದಾರೋ ಅದೇ ರೀತಿಯ ಪರಿಹಾರ ಕೊಡಲಿಕ್ಕೆ ವ್ಯವಸ್ಥೆ ಮಾಡಲಾಗುವುದು. ಮತ್ತು ಏನೂ ತಪ್ಪು ಮಾಡದೆ ಇರುವವರನ್ನು ಅರೆಸ್ಟ್ ಮಾಡಿದ್ದರೆ ಪರಿಶೀಲನೆ ಮಾಡಿ ನೋಡುತ್ತೇವೆ.

ತಾವು ಒಂದು ಹೆಸರು ಹೇಳಿದ್ದೀರಿ ಅಣ್ಣಪ್ಪ ಮೊಗೆ ಅಂತ ಅದನ್ನೂ ತಿಳಿಸಿ ತಪ್ಪು ಮಾಡದೆ ಇರುವವರಿಗೆ ತೊಂದರೆ ಕೂಡದೆ ಇರುವ ಹಾಗೆ ಏರ್ಪಾಡು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮೈಸೂರು ಬಾಂಬ್‌ಬ್ಲಾಸ್ಟ್ ಸ್ಟೇಟ್‌ಮೆಂಟ್ ಮಾಡಬೇಕು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಒಂದು 5 ನಿಮಿಷದಲ್ಲಿ ಹೇಳುತ್ತೇನೆ. ಇಲ್ಲ ಎಂದರೆ ನಾಳೆ ಬೆಳಿಗ್ಗೆ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾವು ಬೆಳಿಗ್ಗೆ 11 ಗಂಟೆಗೆ ತಮ್ಮನ್ನು ಕೇಳಲು ಶುರು ಮಾಡಿದ್ದು, 6-30 ಗಂಟೆ ಆದರೂ ಸಹ ಸರ್ಕಾರದಲ್ಲಿ ಒಂದಷ್ಟು, ಮಾಹಿತಿ ಒದಗಿಸುವುದಕ್ಕೆ ವಿಚಾರಗಳು ಇಲ್ಲ ಎಂದು ಹೇಳಿದರೆ, ಹೇಳಿ ಮತ್ತೆ ನಿಮ್ಮ ಸರ್ಕಾರದ ನಡವಳಿಕೆ, ನಿಮ್ಮ ಸರ್ಕಾರದ ಆಡಳಿತ ನೀವು ಜನಕ್ಕೆ ಹೇಳತಕ್ಕಂಥಾದ್ದು ಎಲ್ಲಾದರೂ ಉಂಟೆ, ನಾಚಿಕೆಯಾಗುತ್ತಲ್ಲ, ಸ್ವಾಮಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಪ್ರತಿದಿನ ಮೈಸೂರಿನಲ್ಲಿ ಬಾಂಬ್ ಬೀಳುತ್ತಿದೆ; ಬಾಂಬ್ ಹಾಕುತ್ತಿದ್ದಾರೆ, ಬಾಂಬ್‌ಸಿಡಿಯುತ್ತಿದೆ. ನಾನು ತಮಗೆ ಹೇಳುತ್ತೇನೆ ಬೆಳಿಗ್ಗೆ 11 ಗಂಟೆಯಿಂದ 6 ಗಂಟೆಯವರೆಗೂ ಒಂದು ಹೇಳಿಕೆ ಕೊಡಲಿಕ್ಕೆ ಆಗಲಿಲ್ಲ, ಎಂದರೆ ಮಾನ್ಯ ಅಧ್ಯಕ್ಷರೇ, ತಾವು ಇದನ್ನು ಈಗ ತೀರ್ಮಾನ ಮಾಡಿ. ಇದು ಬೆಳಿಗ್ಗೆ ನಾವು 11 ಗಂಟೆಗೆ ಪ್ರಾರಂಭ ಮಾಡಿದ್ದು ಸ್ವಾಮಿ, ಸರ್ಕಾರದವರು ಎಷ್ಟು ಲಘುವಾಗಿ ತೆಗೆದುಕೊಂಡಿದ್ದಾರೆ, ಇವರು ಇಷ್ಟು ಹೊತ್ತಿಗೆ ಹೇಳಿಕೆ ಕೊಡಲಿಕ್ಕೆ ಆಗಲಿಲ್ಲ ಅಂದರೆ ಏನು ಸ್ವಾಮಿ. ಸರ್ಕಾರಕ್ಕೆ ಏನು ಎಂದು ಹೇಳೋಣ. ಇವರ ಆಡಳಿತ ಪುರಸಭೆಗಿಂತ ಕಡಿಮೆ ಆಗಿ ಹೋಯಿತೇ, ಏನು ಇದು!

ಶ್ರೀ ಹೆಚ್. ಏಕಾಂತಯ್ಯ : ಪುರಸಭೆ ಎಂದು ಹೇಳಿ ನೀವು ಅವರಿಗೆ ಅವಮಾನ ಮಾಡಬೇಡಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಒಂದು ನಿಮಿಷದಲ್ಲಿ ಹೇಳಿಕೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಒಂದು ನಿಮಿಷ, ಎರಡು ನಿಮಿಷ ಎಂದರೆ, ಯಾರು ಸ್ವಾಮಿ ನಿಮ್ಮ ಅಧಿಕಾರಿಗಳು, ಯಾರು ತಂದು ಕೊಡುವವರು. ಏನು ಡೆಲ್ಲಿಯಿಂದ ಬರಬೇಕೇ, ಯಾರು ಹೇಳಿಕೆ ತಂದು ಕೊಡುವವರು ಹೇಳಿ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ತಾವು ವಿಚಾರವನ್ನು ಗಂಭೀರವಾಗಿ ಪರಿಶೀಲಿಸಬೇಕು. ಬೆಳಿಗ್ಗೆ ಪ್ರಸ್ತಾಪಮಾಡಿದಂಥ ವಿಚಾರಗಳ ಬಗ್ಗೆ ಸರ್ಕಾರದವರು ತಮಗೆ ಇನ್ನೂ ಯಾವ ಮಾಹಿತಿಗಳು ಬಂದಿಲ್ಲವೆಂದು ಹೇಳುವುದಾದರೆ, ಸರಕಾರವು ಅಸ್ತಿತ್ವದಲ್ಲಿದೆಯೇ? ಮೊನ್ನೆ ಈ ಕಡೆಯ ಸದಸ್ಯರು ಹುಡುಗಾಟಿಕೆಯ ಸರ್ಕಾರ ಎಂದು ಹೇಳಿದಾಗ ಮಾನ್ಯ ರಂಗನಾಥರವರು ಬಹಳ ಬೇಸರಪಟ್ಟುಕೊಂಡರು. ಆ ಪದವನ್ನು ಉಪಯೋಗಿಸಬಾರದಿತ್ತು ಎಂದು ಹೇಳಿದರು.

ಹಾಗಾದರೆ ಈ ಸರಕಾರಕ್ಕೆ ಯಾವ ಪದವನ್ನು ಉಪಯೋಗಿಸಬೇಕು ಎಂದು ನೀವೇ ಹೇಳಿ. ಬೇಜವಾಬ್ದಾರಿ ಸರ್ಕಾರವೆಂದು ಹೇಳಬೇಕೋ ಅಥವಾ ಬೇರಾವುದೇ ಪದವನ್ನು ಹೇಳಬೇಕೇ ಎಂಬ ಬಗ್ಗೆ ಒಂದು ಪದವನ್ನು ನೀವೇ ಹುಡುಕಿಕೊಡಬೇಕು.

(ಗೊಂದಲ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಪ್ರತಿಯೊಂದು ವಿಷಯಕ್ಕೂ ಸಂಶಯ ಪಡುವುದು ಸರಿಯಲ್ಲ. ನಮ್ಮ ವಿರೋಧ ಪಕ್ಷದ ನಾಯಕರು ಸಂಶಯಾತ್ಮಕವಾಗಿದ್ದಾರೆ.

ಸಂಶಯಾತ್ಮಾ....

ಶ್ರೀ ಆರ್. ವಿ. ದೇಶಪಾಂಡೆ : ಇವೊತ್ತು ಮಾನ್ಯ ಮುಖ್ಯಮಂತ್ರಿಯವರು ಇದ್ದಿದ್ದರೆ ನಿಮ್ಮ ಎಲ್ಲಾ ಪೋಲೀಸ್ ದಾಖಲೆಗಳನ್ನು ಮುಂಜಾನೆಯೇ ಕೊಡುತ್ತಾ ಇದ್ದರು. ಅವರು ಡೆಲ್ಲಿಗೆ ಹೋಗಿದ್ದಾರೆ. ಆದಕಾರಣ ಅವರ ಬದಲು ಇವರು ಹೇಳುತ್ತಾರೆಯೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ ಸರ್ಕಾರ ಏನು ಮಾಡಿದೆ ಎಂದು ಕೇಳುವುದಕ್ಕಿಂತ ಮುಂಚಿತವಾಗಿ, ಸರ್ಕಾರವೇ ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು. ಸರ್ಕಾರವೇ ತುದಿಗಾಲಲ್ಲಿ ನಿಂತು ಏನು ನಡೆದಿದೆ ಎಂಬ ಬಗ್ಗೆ ಹೇಳಿಕೆಕೊಡಬೇಕಾಗಿತ್ತು. ಅದನ್ನು ಬಿಟ್ಟು 11 ಗಂಟೆಗೆ ನಾವು ಕೇಳಿದ್ದೇವೆ, ಇನ್ನೂ ಇನ್‌ಫರ್ಮೇಶನ್ ಬರುತ್ತಾ ಇದೆ. ಆನಂತರ ಹೇಳುತ್ತೇವೆ ಅಂದರೆ ಏನು ಸ್ವಾಮಿ ಇದು? ಈ ತರಹ ತಾವುಗಳು ಹೇಳುವುದಾದರೆ ಇನ್ಯಾರಿಗೆ ತಾವು ರಕ್ಷಣೆ ಕೊಡುತ್ತೀರಿ? ನಿಮ್ಮಿಂದ ಯಾರಿಗೂ ರಕ್ಷಣೆ ಕೊಡಲು ಖಂಡಿತಾ ಸಾಧ್ಯವಿಲ್ಲ. ಪ್ರತಿದಿನವೂ ಮೈಸೂರಿನಲ್ಲಿ ಬಾಂಬ್ ಸಿಡಿಯುತ್ತಾ ಇದೆ. ಅದರ ಬಗ್ಗೆ ಏನೂ ಹೇಳಲು ಆಗುತ್ತಿಲ್ಲ ಅಂದರೆ ಏನಿದು? ಹೀಗೆ ತಾವುಗಳು ನಡೆದುಕೊಳ್ಳುವುದಾದರೆ ಅತ್ಯಂತ ನೋವಿನಿಂದ ನಾವು ಈ ಮಾತುಗಳನ್ನು ಹೇಳ ಬೇಕಾಗಿದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಇದು ಮುಂಚೆ ಬರಬೇಕಾಗಿತ್ತು, ನಾವು ಸ್ವಲ್ಪ ಮೋಸ ಹೋದೆವು. ಮಾನ್ಯ ಚಂದ್ರೇಗೌಡರ ಭಾಷಣ 7 ಗಂಟೆವರೆಗೆ ನಡೆಯುತ್ತದೆ ಎಂದು ತಿಳಿದುಕೊಂಡಿದ್ದೆವು. ತಾವು ಕ್ಷಮಿಸಬೇಕಾಗಿ ಕೋರುತ್ತೇವೆ. ಈಗ ಬೆಳಗಾವಿ ಘಟನೆ ಬಗ್ಗೆ ಮೊದಲು ಹೇಳಿ ನಂತರ ಮೈಸೂರು ಘಟನೆಯ ಬಗ್ಗೆ ಹೇಳುತ್ತೇನೆ.

2. ಬೆಳಗಾವಿಯ ಘಟನೆ ಬಗ್ಗೆ :

ಬೆಳಗಾವಿಯ ಗೂಡ್ಸ್ ರೈಲ್ವೇ ಸ್ಟೇಶನ್ ಯಾರ್ಡ್‌ನ ರೋಡ್ ನಂಬರ್ 7ರಲ್ಲಿ ಕರ್ತವ್ಯದ ಮೇಲಿದ್ದ ಒಬ್ಬ ಆರ್‌ಪಿಎಸ್ ಪೋಲೀಸ್ ಪೇದೆಯು ಬಾಂಬ್ ನೋಡಿದ ಬಗ್ಗೆ ಕ್ಯಾಂಪ್ ಆಫೀಸ್ ಪೋಲೀಸ್ ಸ್ಟೇಶನ್‌ಗೆ ಮತ್ತು ಪೋಲೀಸ್ ಕಂಟ್ರೋಲ್ ರೂಮ್‌ಗೆ ತಿಳಿಸಿದರು. ಶ್ವಾನದಳದೊಂದಿಗೆ ಪೋಲೀಸ್ ಅಧಿಕಾರಿಗಳು ಆ ಸ್ಥಳಕ್ಕೆ ಧಾವಿಸಿದರು. ಬಾಂಬ್‌ನಂತೆ ತೋರಿದ ವಸ್ತುವನ್ನು ರೈಲ್ವೇ ಹಳಿಯಿಂದ, ಉಸುಕಿನ ಚೀಲದಲ್ಲಿರಿಸಿ ಸುರಕ್ಷಿತ ಸ್ಥಳಕ್ಕೆ ಒಯ್ಯಲಾಯಿತು. ಸದರಿ ವಸ್ತುವಿನ ಮೇಲೆ ಬಿಎಫ್‌ಪಿ ರೆಮಿಟೆಡ್ - 90 , 3887 ಎಂದು ಬರೆಯಲಾಗಿತ್ತು. ಸ್ಫೋಟಕ ನಿಯಂತ್ರಕರು ಮಂಗಳೂರು ಇವರು ಇದು ರಕ್ಷಣಾ ಸೇವೆಯಲ್ಲಿ ಉಪಯೋಗಿಸಿರುವ ವಸ್ತುವೆಂದು ಅಭಿಪ್ರಾಯ ಪಟ್ಟರು.

3. ಮೈಸೂರಿನ ಘಟನೆಯ ಬಗ್ಗೆ :

ಇನ್ನು ತಾರೀಖು 31-3-93ರಂದು ಕೆಲವು ಅಪರಿಚಿತ ವ್ಯಕ್ತಿಗಳು, ಶ್ರೀ ಬಾಳಯ್ಯ, ತುರಬಳಿ ಸ್ಟ್ರೀಟ್ ಮಂಡಿಮೊಹಲ್ಲಾ ಮೈಸೂರು ನಗರ ಇವರ ಮನೆಯ ಕಿಟಕಿಯ ಮೇಲೆ ಸ್ಫೋಟಕ ವಸ್ತುವನ್ನು ಇಟ್ಟಿದ್ದಾರೆಂದು ವರದಿಯಾಯಿತು. ಮಂಡಿ ಪೋಲೀಸ್ ಠಾಣೆಯಲ್ಲಿ ಈ ವಿಚಾರವಾಗಿ ಸ್ಫೋಟಕ ವಸ್ತುಗಳ ಕಾಯಿದೆಯ ಪ್ರಕಾರ ಪ್ರಕರಣಗಳನ್ನು ದಾಖಲೆ ಮಾಡಿಸಿ, ಹಾಗೂ ತನಿಖೆಯು ಮುಂದುವರಿದಿದೆ. ಯಾವುದೇ ಪ್ರಾಣಹಾನಿ ಅಥವಾ ಗಾಯಗಳ ಬಗ್ಗೆ ವರದಿಯಾಗಿಲ್ಲ. ಮತ್ತೊಂದು ಘಟನೆಯಲ್ಲಿ ದಿನಾಂಕಃ 2-4-1993ರಂದು ಲಷ್ಕರ್ ಮೊಹಲ್ಲಾ, ಯರಗಟ್ಟ ಸ್ಟ್ರೀಟ್‌ನ 23ನೇ ಅಡ್ಡರಸ್ತೆಯಲ್ಲಿರುವ ಮನೆ ನಂಬರ್ 2536ರಲ್ಲಿ ಲಘು ಸ್ಫೋಟಕವಾಯಿತು. ಸದರಿ ಘಟನೆಯಲ್ಲಿ ಮನೆಯ ಮುಂಬಾಗಿಲು ಹಾಗೂ ಕಾಂಪೌಂಡ್ ಗೋಡೆಗೆ ಹಾನಿಯಾಗಿದೆ, ತನಿಖೆಯು ಮುಂದುವರಿದಿದೆ. ಕಳೆದ ಮೂರು ದಿವಸಗಳಿಂದ ಮೈಸೂರು ನಗರದಲ್ಲಿ ಕೆಲವು ಕುಚೇಷ್ಟೆಗಳು ನಡೆಯುತ್ತಿವೆ ಎಂದು ವರದಿಯಾಗಿದೆ. ಈ ವಿಷಯದಲ್ಲಿ ತಪ್ಪಿತಸ್ಥರನ್ನು ಅಪರಾಧಿಗಳನ್ನು ಪತ್ತೆ ಹಚ್ಚಲು ಪೋಲೀಸ್ ಸಿಬ್ಬಂದಿಯು ತೀವ್ರತರಹ ಪ್ರಯತ್ನ ನಡೆಸಿದ್ದಾರೆ. 4-4-1993ರ ಬೆಳಿಗ್ಗೆ ಮೈಸೂರಿನ ಗೌಸಿಯಾ ನಗರದಲ್ಲಿ ಕ್ಯಾತಮಾರನ ಹಳ್ಳಿಯ ರೆವಿನ್ಯೂ ಸೈಟ್‌ಗಳಲ್ಲಿನ ಸುಮಾರು 400 ಮನೆಗಳ ನಡುವೆ ಒಂದು ಜಾಗವಿದ್ದು, ಅದರಲ್ಲಿ ಒಂದು ಹಳೆಯ ಶಿಥಿಲ ಗುಡಿಸಲು ಇದೆ. ಅದರ ಎದುರುಗಡೆಯ ಮನೆಯಲ್ಲಿ ಮಲ್ಲಯ್ಯ ಎಂಬ ಒಬ್ಬ ಕೂಲಿಯು ವಾಸವಾಗಿದ್ದಾರೆ. ಅವರು ಬೆಳಿಗ್ಗೆ ಪ್ರಾತರ್ವಿಧಿಗೆ ಆ ಗುಡಿಸಲು ಬಳಿಗೆ ಹೋದಾಗ, ಅಲ್ಲಿ ಕೆಳಗೆ ಇರಿಸಿದ್ದ ಪ್ಲಾಸ್ಟಿಕ್ ಚೀಲವನ್ನು ನೋಡಿ, ಸಂಶಯಗೊಂಡು ಪೋಲೀಸರಿಗೆ ತಿಳಿಸಿದರು. ಪೋಲೀಸರು ಅದನ್ನು ಎಚ್ಚರಿಕೆಯಿಂದ ತೆಗೆಸಿದರು. ಟಾಟಾ ವಿಜ್ಞಾನ ಪರಿಣತರು ಅದನ್ನು ಪರೀಕ್ಷಿಸಿ, ಅದು ಬತ್ತಿಯನ್ನು ಹಚ್ಚಿಸಿ ಇಡಬೇಕಾದ ಪಟಾಕಿಯಂತಹ ಒರಟು ಬಾಂಬ್ ಎಂದಿದ್ದಾರೆ. ಇದರೊಳಗೆ ಕಬ್ಬಿಣದ ಚೂರುಗಳನ್ನು ಇಟ್ಟಿದ್ದಾರೆ. ಪೋಲೀಸರು ಸಂಶಯಸ್ಥರನ್ನು ಪ್ರಶ್ನಿಸಿದ್ದಾರೆ. ಶ್ವಾನದಳದ ಸಹಾಯದಿಂದ ಸಂಶಯಾತ್ಮಕ ಸ್ಥಳಗಳನ್ನು ಶೋಧಿಸಲಾಗುತ್ತಿದೆ.

ಶ್ರೀ ಆರ್. ವಿ. ದೇಶಪಾಂಡೆ : ಈ ಸ್ಟೇಟ್‌ಮೆಂಟನ್ನು ಮುಂಜಾನೆಯೇ ತಾವು ಮಾಡಬಹುದಾಗಿತ್ತು. ಇದರಲ್ಲಿ ಏನಿದೆ? ಇದಕ್ಕೆ ಪೋಲೀಸರ ಸಹಾಯವಿಲ್ಲದೇ ನೀವೇ ಹೇಳ ಬಹುದಾಗಿತ್ತು. ಹೀಗೆ ಆಗಿದೆ, ಸಂಶಯಾಸ್ಪದದ ಮೇಲೆ ತನಿಖೆ ನಡೆಯುತ್ತಾ ಇದೆ ಎಂದು ನೀವೇ ಹೇಳಬಹುದಾಗಿತ್ತು. ಅದು ನಾರ್ಮಲ್ ಕೋರ್ಸ್. ನಾನು ಕೇಳುವುದೇನೆಂದರೆ, ಕಳೆದ 10-12 ದಿವಸಗಳಲ್ಲಿ ಮೈಸೂರಿನಲ್ಲಿ ನಾಲ್ಕೈದು ಬಾರಿ ಸ್ಫೋಟವಾಯಿತು, ಬೆಳಗಾಂನಲ್ಲಿ ಆಯಿತು, ಅದರಲ್ಲಿ ನೀವು ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ? ಇದಕ್ಕೆ ಸಂಬಂಧಪಟ್ಟ ಹಾಗೆ ಇದುವರೆಗೂ ಒಬ್ಬನನ್ನೂ ಕೂಡ ಅರೆಸ್ಟ್ ಮಾಡುವುದು ನಿಮ್ಮಿಂದ ಆಗಿಲ್ಲ. ಈ ವಿಚಾರದಲ್ಲಿ ನಿಮ್ಮ ಗುಪ್ತದಳ ವಿಭಾಗವು ಪೂರ್ಣವಾಗಿ ಫೇಲ್ಯೂರ್ ಆಗಿದೆ. ಪೋಲೀಸ್ ಇಲಾಖೆಯ ಮೇಲೆ ನಿಮ್ಮ ಹಿಡಿತವು . ಪೂರ್ಣವಾಗಿ ಹೋಗಿದೆ. ಇವರ ಸಹಾಯಕ್ಕೆ ಸಾರ್ವಜನಿಕರು ಬರುತ್ತಾ ಇದ್ದಾರೆ. ಬೆಳಗಾವಿ ಮತ್ತು ಮೈಸೂರುಗಳಲ್ಲಿ ಯಾರೋ ಒಬ್ಬರು ನೋಡಿ ಪೋಲೀಸರಿಗೆ ರಿಪೋರ್ಟ್ ಮಾಡಿದ್ದಾರೆ. ಹಾಗಾದರೆ, ನಿಮ್ಮ ಇಲಾಖೆ ಏನು ಮಾಡುತ್ತಿದೆ? ನಿಮ್ಮ ಕಾಂಟ್ರಿಬ್ಯೂಶನ್ ಏನು? ನಿಮ್ಮ ಗುಪ್ತದಳ ಏನು ಮಾಡುತ್ತಿದೆ? ಹಾಗಾಗಿ ನೀವು ಏನು ಮಾಡುತ್ತಿದ್ದೀರಿ ಎಂಬುದು ನಮಗೆ ಗೊತ್ತಾಗುತ್ತಾ ಇಲ್ಲ. ಇದು ನಮಗೇ ನಾಚಿಕೆ ತರುವಂಥ ವಿಚಾರವಾಗಿದೆ. ಇವತ್ತು ಮತ್ತೆ ಇಂಥ ಕೃತ್ಯವಾದರೆ ನಾಳೆ ಏನು ಮಾಡಬೇಕು ಎಂದು ಯೋಚನೆಯಾಗಿದೆ. ಏಕೆಂದರೆ ಇದಕ್ಕೆ ಸರಕಾರದಿಂದ ಉತ್ತರವೂ ಕೂಡ ಸಿಗುತ್ತಾ ಇಲ್ಲ, ಸರ್ಕಾರದಿಂದ ಯಾವ ಕ್ರಮವೂ ಇಲ್ಲ. ಜನರಲ್ಲಿ ಉಂಟಾದ ಭಯದ ವಾತಾವರಣವನ್ನು ದೂರ ಮಾಡಲು ನಿಮ್ಮ ಕಡೆಯಿಂದ ಯಾವ

ಪ್ರಯತ್ನವೂ ಆಗುತ್ತಾ ಇಲ್ಲ. ಹಾಗಾಗಿ ಈ ಬಗ್ಗೆ ಇದುವರೆಗೆ ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ? ಹಾಗೆಯೇ ಯಾರು ನಿಮಗೆ ವಿಷಯವನ್ನು ತಿಳಿಸಿದ್ದಾರೆ ಅವರಿಗೆ ಯಾವ ಸಹಾಯ ಮಾಡುತ್ತೀರಿ ಎಂದು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಈ ಸರ್ಕಾರಕ್ಕೆ ಏನಾಗಿದೆ ಎಂದು ನಮಗೆ ತಿಳಿಯುತ್ತಾ ಇಲ್ಲ. ಇದಕ್ಕೆ ಗ್ರಹಣ ಬಡಿದಿದೆಯೇ? ಅಥವಾ ಗ್ರಹಣ ಹಿಡಿದಿದೆಯೇ?

ಶ್ರೀ ಆರ್. ವಿ. ದೇಶಪಾಂಡೆ : ನೀವು ಇದುವರೆಗೆ ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ ಮತ್ತು ಯಾರು ನಿಮಗೆ ಇದನ್ನು ತೋರಿಸಿದ್ದಾರೆ ಅವರಿಗೆ ಅವಾರ್ಡ್ ಕೊಡುತ್ತೀರಾ ಎಂದು ತಿಳಿಸಬೇಕು. ಈ ಪ್ರಕಾರವಾಗಿ ಏಕೆ ಆಗುತ್ತಿದೆ ಮತ್ತು ನಿಮ್ಮ ಇಂಟಲಿಜೆನ್ಸ್ ಏತಕ್ಕೆ ವಿಫಲ ಆಗಿದೆ? ಅದಕ್ಕೆ ಏನು ಕಾರಣ ಎಂಬ ಸ್ಪಷ್ಟೀಕರಣ ಮಾನ್ಯ ಸಚಿವರಿಂದ ಬರಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಂಸದೀಯ ಸಚಿವರು ಒಂದು ಹೇಳಿಕೆ ಕೊಟ್ಟರು. ಈ ಹೇಳಿಕೆಗಿಂತ ಪತ್ರಿಕೆಗಳಲ್ಲಿ ಇನ್ನೂ ಚೆನ್ನಾಗಿ ವಿಚಾರಗಳು ಬಂದಿವೆ. ಇನ್ನೂ ಬಹಳ ಸುದೀರ್ಘವಾಗಿ ಯಾವ ಯಾವ ರೀತಿಯಲ್ಲಿ ಏನೇನು ನಡೆಯುತ್ತಿದೆ ಎಂಬುದು ಪತ್ರಿಕೆಗಳಲ್ಲಿ ಬಂದಿದೆ. ಆದರೆ ಇವರ ಹೇಳಿಕೆಯಲ್ಲಿ ಯಾವ ಶಕ್ತಿಯೂ ಇಲ್ಲ, ಯಾವ ಬುಡವೂ ಇಲ್ಲ, ಸರ್ಕಾರ ಈ ಬಗ್ಗೆ ಏನು ಮಾಡುತ್ತದೆ ಎಂಬ ಯಾವ ರೀತಿನೀತಿಗಳೂ ಇಲ್ಲ. ಎಲ್ಲೋ ರಸ್ತೆಯಲ್ಲಿ ನಿಂತುಕೊಂಡು ಹುಡುಗರು ಮಾತನಾಡುವ ರೀತಿಯಲ್ಲಿ ಹೇಳಿಕೆ ಕೊಟ್ಟರೆ ಹೇಗೆ? ಈ ಹೇಳಿಕೆಗೆ ಜವಾಬ್ದಾರಿ ಇದೆಯೇ? ಬೆಳಗಾವಿಯಲ್ಲಿ ಸಿಕ್ಕಿದ್ದು ರಕ್ಷಣಾ ವಸ್ತು ಎಂದರು. ಹಾಗಾದರೆ ಅದು ಯಾವ ರಕ್ಷಣಾ ವಸ್ತು? ಬಾಂಬ್‌ನ ಮೇಲೆ ಹೆಸರು ಏಕೆ ಬರೆದಿತ್ತು? ಅದು ಅಲ್ಲಿಗೆ ಬರಲು ಕಾರಣಗಳಾದರೂ ಏನು? ಅದರ ಬಗ್ಗೆ ಇವರಿಗೆ ಯಾವ ವಿವರಗಳೂ ಸಿಕ್ಕಿಲ್ಲ. ಹಾಗೆಯೇ ಮೈಸೂರಿನಲ್ಲಿ ಪ್ರತಿದಿನವೂ ಬಾಂಬ್ ಸಿಡಿಯುತ್ತಾ ಇದೆಯಲ್ಲ, ಅದಕ್ಕೆ ನೋಡಿದರು, ಗೋಡೆಯ ಪಕ್ಕದಲ್ಲಿತ್ತು, ತೆಗೆದುಕೊಂಡು ಹೋದರು, ಬುಟ್ಟಿಗೆ ಹಾಕಿಕೊಂಡು ಹೋದರು, ನಾಯಿಗಳು ಓಡಾಡುತ್ತಿವೆ ಅಂದರೆ ಇದು ಹೇಳಿಕೆಯೇ? ಇದು ಹೇಳಿಕೆಕೊಡತಕ್ಕಂಥ ರೀತಿಯೇ? ಪೋಲೀಸಿನವರು ಒಂದಿಷ್ಟು ನಾಯಿಗಳನ್ನು ಇಟ್ಟುಕೊಂಡು ಸುಮ್ಮನೆ ಸುತ್ತಿಸುತ್ತಾ ಇದ್ದಾರೆ. ಇನ್ನೇನೂ ಕೂಡ ಸರ್ಕಾರದಿಂದ ಮಾಡಲು ಆಗಿಲ್ಲ. ಇದರ ಬಗ್ಗೆ ಪರಿಣಾಮಕಾರಿಯಾಗಿ ತನಿಖೆ ನಡೆಸುವುದಕ್ಕಾಗಲಿ, ಜವಾಬ್ದಾರಿಯನ್ನು ಸಂಬಂಧಪಟ್ಟವರಿಗೆ ಕೊಡುವುದಕ್ಕಾಗಲೀ, ಇದು ಎಲ್ಲಿಂದ ಬಂತು ಎಂದು ಹುಡುಕಿಸುವುದಕ್ಕಾಗಲೀ, ಮುಂತಾದ ವಿಚಾರಗಳಲ್ಲಿ ಸರ್ಕಾರವು ವಿಫಲವಾಗಿದೆ. ನಮ್ಮ ಸದನಕ್ಕೂ ಕೂಡ ಎರಡು ನಾಯಿಗಳನ್ನು ತೆಗೆದುಕೊಂಡು ಬಂದು ಅವುಗಳಿಂದ ಶೋಧಿಸಿ ವಾಪಸ್ ತೆಗೆದುಕೊಂಡು ಹೋದರು. ಇಷ್ಟೇ ಪೋಲೀಸ್ ಮತ್ತು ಸರ್ಕಾರ ಮಾಡತಕ್ಕಂಥದ್ದು.

ಈ ವಿಚಾರಗಳನ್ನು ಅಷ್ಟು ಸುಲಭವಾಗಿ, ಲಘುವಾಗಿ ತೆಗೆದುಕೊಳ್ಳಬಾರದು. ಇದೇ ರೀತಿಯಲ್ಲಿ ಸರ್ಕಾರವು ನಡೆಯುವುದಾದರೆ, ಇನ್ನು ಮುಂದೆ, ದುರ್ದಿನಗಳು, ಕೆಟ್ಟ ದಿನಗಳು ಬರುತ್ತವೆ ಹಾಗೂ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನನಗೆ ಸಂಬಂಧವಿಲ್ಲವೆಂದು ಹೇಳಿ ಸರ್ಕಾರವೇ ಕೈಎತ್ತಿ ಕೊಳ್ಳಬೇಕಾದ ಪರಿಸ್ಥಿತಿಯು ಬರುತ್ತದೆ. ಹೀಗಾಗಿ ಇಂಥ ಹೇಳಿಕೆಗಳನ್ನು ಸರ್ಕಾರವು ಕೊಡತಕ್ಕದ್ದಲ್ಲ. ನಾವು ಈಗ ಬಹಳವಾಗಿ ಚಿಂತನೆ ಮಾಡುತ್ತಾ ಇದ್ದೇವೆ. ಲೆಕ್ಕಾಚಾರವಾಗಿ ಈ ಬಾಂಬಿನ ಸಿಡಿತಕ್ಕೋಸ್ಕರವಾಗಿ ಸರ್ಕಾರಕ್ಕೆ ನಿಜವಾಗಿಯೂ ಗೌರವವಿದ್ದರೆ ಸರ್ಕಾರಕ್ಕೆ, ಸರ್ಕಾರಕ್ಕೆ ನಿಜವಾಗಿಯೂ ಕಾಳಜಿ ಇದ್ದರೆ, ರಾಜೀನಾಮೆಯನ್ನು

ಕೊಡಬೇಕಾಗುತ್ತದೆ. ನಾವು ಸರ್ಕಾರಕ್ಕೆ ನಿಜವಾಗಿಯೂ ತಪ್ಪು ಮಾಡಿದ್ದೇವೆ, ರಕ್ಷಣೆಯನ್ನು ಕೊಡುವುದಕ್ಕಾಗುವುದಿಲ್ಲ. ಕರ್ನಾಟಕದಲ್ಲಿ ಬೀದಿಬೀದಿಯಲ್ಲಿ ಬಾಂಬ್‌ಗಳು ಬರುತ್ತಿದೆ ಎಂದು ಹೇಳಿ ನೀವು ರಾಜೀನಾಮೆಯನ್ನು ಕೊಡಬೇಕಾಗಿತ್ತು. ಈ ನಿಮ್ಮ ಹೇಳಿಕೆ ಏನು ಸ್ವಾಮಿ? ಆ ಹೇಳಿಕೆಯಲ್ಲಿ ಏನು ಇದೆ?

ಶ್ರೀ ಎಂ. ಪಿ. ವೆಂಕಟೇಶ್ : ಈ ನಾಡ ಬಾಂಬನ್ನು ತಯಾರು ಮಾಡುವುದಕ್ಕೆ ಪೋಲೀಸರ ಸಹಕಾರ ಇದೆ. ಎಲ್ಲೆಲ್ಲಿ ಯಾರ್‍ಯಾರು ತಯಾರು ಮಾಡುತ್ತಾರೆಂದು ಪೋಲೀಸಿನವರಿಗೂ ಗೊತ್ತಿದೆ. ಇದುವರೆಗೂ ಅವರು ಸಹಕಾರವನ್ನು ಕೊಟ್ಟುಕೊಂಡು ಬಂದಿದ್ದಾರೆ. ಇದುವರೆಗೂ ನಾಡಬಾಂಬುಗಳನ್ನು ತಮಿಳುನಾಡಿನಿಂದ ತರಿಸುತ್ತಿದ್ದರು. ಈಗ ಅಲ್ಲಲ್ಲೇ ತಯಾರು ಮಾಡುತ್ತಾರೆ. ಮಂಡಿಮೊಹಲದಲ್ಲಿ ತಯಾರು ಮಾಡುವುದು ಪೋಲೀಸಿನವರಿಗೂ ಗೊತ್ತಿದೆ. ಈಗ ಅವರನ್ನು ಹಿಡಿಯವುದಕ್ಕಾಗುವುದಿಲ್ಲ. ಅವರನ್ನು ಹಿಡಿದರೆ ನಮಗೆ ಇಷ್ಟು ದಿವಸ ಪೋಲೀಸಿನವರು ಸಹಕಾರವನ್ನು ಕೊಡುತ್ತಿದ್ದರು, ಬಾಂಬ್ ತಯಾರು ಮಾಡುವುದಕ್ಕೆ ಇದರ ರಕ್ಷಣೆ ಇತ್ತು ಎನ್ನುವಂತಹ ಮಾತನ್ನು ಹೇಳುತ್ತಾರೆ. ನಾಯಿಗಳನ್ನು ಬಿಟ್ಟಿದೆ ಎಂದು ಮಾನ್ಯಮಂತ್ರಿಗಳು ಹೇಳುತ್ತಾರೆ. ಆ ನಾಯಿ ಎಲ್ಲವನ್ನೂ ಮೂಸಿಕೊಂಡು ಹೋಗಿ ಯಾರು ಸುಮ್ಮನೆ ನಿಂತುಕೊಂಡಿರುತ್ತಾರೆ, ಅವರ ಬಟ್ಟೆಯನ್ನು ಹಿಡಿದುಕೊಳ್ಳುತ್ತದೆ. ಆಗ ಅವನನ್ನು ಅರೆಸ್ಟ್ ಮಾಡುತ್ತಾರೆ. ಬಟ್ಟೆಯನ್ನು ನಾಯಿಯು ಹಿಡಿದರೆ ಅವನನ್ನು ಲಾಕಪ್‌ನಲ್ಲಿ ಹಾಕಿ ಒದೆಯುತ್ತಾರೆ. ಈ ಪರಿಸ್ಥಿತಿ ನಾಯಿಯಿಂದ ಆಗಿದೆ. ಅದಕ್ಕೆ ಸರಿಯಾಗಿ ಊಟವನ್ನು ಹಾಕದೆ ಇದ್ದರೆ ಮಾಂಸವನ್ನು ಸರಿಯಾಗಿ ಹಾಕದೆ ಇದ್ದರೆ, ಅದು ಮನುಷ್ಯರ ಬಟ್ಟೆಯನ್ನು ಹಿಡಿಯುತ್ತದೆ. ಈ ಪರಿಸ್ಥಿತಿ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ನಾಯಿಗಳ ಕಥೆ ನನಗೂ ಬಹಳ ಗೊತ್ತು. ಸ್ವಂತ ನಾಯಿಗಳನ್ನು ಇವರು ಸಾಕಿಕೊಂಡು ಅದು ನಿರಪರಾಧಿಗಳನ್ನು ಮೂಸಿ ನೋಡಿದೆ. ಅವರನ್ನು ಹಿಡಿದು ನೇಣುಗಂಬಕ್ಕೆ ಏರಿಸುವಂತಹ ಮಟ್ಟಕ್ಕೆ ಹೋಗಿದ್ದಾರೆ. ಕೆಲವು ನಿರಪರಾಧಿಗಳನ್ನು ಜೈಲಿಗೆ ಹಾಕಿದ್ದಾರೆ. ನಾಯಿಗಳನ್ನು ಕರೆಸತಕ್ಕದ್ದು, ಬೆರಳು ತಜ್ಞರನ್ನು ಕರೆಸತಕ್ಕಂಥದ್ದು ಏನಿದೆ ಅದರಲ್ಲಿ ಸರ್ಕಾರ ಬಹಳ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ.

ಶ್ರೀ ಎಂ. ಪಿ. ವೆಂಕಟೇಶ್ : ಮೈಸೂರು ನಗರದಲ್ಲಿ ಪ್ರತಿದಿನ ಬೆಳಿಗ್ಗೆ ಪೇಪರ್‌ನಲ್ಲಿ ಬರುತ್ತದೆ. ಸರ್ಕಲ್ ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಿದ್ದೇವೆ, ಪೋಲೀಸ್ ಸಬ್ ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಿದ್ದೇವೆ, ಪೇದೆಯನ್ನು ಸಸ್ಪೆಂಡ್ ಮಾಡಿದ್ದೇವೆ. ರೇಪ್ ಮಾಡಿದ್ದಾರೆ ಎಂದು ಅವರಿಂದ ದೂರನ್ನು ತೆಗೆದುಕೊಂಡು ಸಸ್ಪೆಂಡ್ ಮಾಡುವುದು. ಬರೀ ಪೋಲೀಸ್ ಅಧಿಕಾರಗಳನ್ನು ಸಸ್ಪೆಂಡ್ ಮಾಡಿರುವುದು ಪತ್ರಿಕೆಯಲ್ಲಿ ಬರುತ್ತಿದೆ. ಇದನ್ನು ಯಾರೂ ಕೇಳುವವರೇ ಇಲ್ಲ.

ಶ್ರೀ ಎಸ್. ಹೆಚ್. ಕೌಜಲಗಿ : ಇವತ್ತಿನ ದಿವಸ ಬೆಳಗಾಂನಲ್ಲಿ ಆದ ಬಾಂಬ್ ಸ್ಫೋಟದ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದಾರೆ.

ಶ್ರೀ ಡಿ. ಕೆ. ಶಿವಕುಮಾರ್ : ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಚಿಂತನೆಯನ್ನು ಮಾಡುತ್ತಿದ್ದಾರೆ. ಚಾಮರಾಜನಗರವನ್ನು ಬಿಟ್ಟು ಮೈಸೂರಿನಲ್ಲಿ ಏನಾದರೂ ಚುನಾವಣೆಗೆ ನಿಂತುಕೊಳ್ಳುತ್ತಾರೋ ಏನೋ ಎಂದು ಸಂಶಯ ಬರುತ್ತಿದೆ.

ಶ್ರೀ ಎಂ. ಪಿ. ವೆಂಕಟೇಶ್ : ಅವರು ಮೈಸೂರಿನಲ್ಲಿ ಹೋರಾಟವನ್ನು ಮಾಡಿದವರು. ಅವರೇನಾದರು ಬೆಂಗಳೂರಿನ ಬಗ್ಗೆ, ಕನಕಪುರದ ಬಗ್ಗೆ ಮಾತನಾಡಬೇಕೇ?

ಶ್ರೀ ಎಸ್. ಹೆಚ್. ಕೌಜಲಗಿ : ನೀವು ಸರ್ಕಾರದವರು ಒಂದು ಜವಾಬ್ದಾರಿಯಿಂದ ಹೇಳಿಕೆಯನ್ನು ಕೊಡುವ ಕಾಲಕ್ಕೆ ಹಿಂದೆ ಏನಾಯಿತು, ನಾವು ಮುಂದೆ ಏನು ಮಾಡುತ್ತೇವೆ ಎನ್ನುವುದರ ಬಗ್ಗೆ ವಿವರವಾಗಿ ನಿಮಿಷ ನಿಮಿಷದ್ದು ನಮಗೆ ಹೇಳಬೇಕು. ನಿಮಿಷ ನಿಮಿಷದ್ದು ನಮಗೆ ಹೇಳುವುದಕ್ಕಿಂತ ಮೊದಲು, ನಿನ್ನೆ ಪತ್ರಿಕೆಯಲ್ಲಿ ಬಂದಿರುವುದನ್ನು ಇವತ್ತು ಓದುತ್ತೇವೆ ಅಂದರೆ ಹೇಗೆ? ಸೀನಿಯರ್ ಮಿನಿಸ್ಟರ್ ಆಗಿ ತಾವು ಇಂಥಾದ್ದು ಓದುತ್ತೀರಿ ಎಂದರೆ ನಮಗೆ ನಾಚಿಕೆಯಾಗುತ್ತದೆ. ಇವತ್ತು ಬೆಳಗಾಂನಲ್ಲಿ 7 ಗಂಟೆಯ ನಂತರ ಪೋಲೀಸಿನವರು ನಿಮಗೆ ನಾವು ರಕ್ಷಣೆಯನ್ನು ಕೊಡುವುದಕ್ಕಾಗುವುದಿಲ್ಲ, ಅಂಗಡಿಗಳನ್ನು ಬಂದ್ ಮಾಡಿಕೊಂಡು ಹೋಗಿರಿ ಎಂದು ಹೇಳುತ್ತಾರೆ. ಈ ರೀತಿ ಏಳು ಗಂಟೆಯ ನಂತರ ಪ್ರತಿಯೊಂದು ಫ್ಯಾಕ್ಟರಿಯನ್ನು ಬಂದ್ ಮಾಡಿದರೆ ಏನು ಉಳಿಯುತ್ತದೆ. ಹಾಗಾದರೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಏನಿದೆ ಅಥವಾ ನೀವು ಜನರಿಗೆ ರಕ್ಷಣೆಯನ್ನು ಹೇಗೆ ಕೊಡುತ್ತಿರಿ? ಪೋಲೀಸ್ ನಾಯಿಗಳ ಮುಖಾಂತರವಾಗಿ ತನಿಖೆ ನಡೆದಿದೆ ಎಂದು ಹೇಳುತ್ತಿದ್ದೀರಿ. ತಮ್ಮ ಹೇಳಿಕೆಯಲ್ಲಿ ಪೋಲೀಸ್ ನಾಯಿಗಳ ಮುಖಾಂತರ ತನಿಖೆ ಮಾಡುತ್ತೇವೆಂದು ಹೇಳಿದ್ದೀರಿ. ಹಾಗಿದ್ದರೆ ಆ ಪೋಲೀಸ್ ನಾಯಿಗೆ ಒಬ್ಬ ಐ. ಜಿ. ನೇಮಕ ಮಾಡಿ. ಪೋಲೀಸ್ ನಾಯಿಗಳಿಗೆ ಪ್ರಮೋಷನ್ ಕೊಡಬೇಕು. ಪೋಲೀಸ್ ನಾಯಿಗೆ ಒಬ್ಬ ಐ.ಜಿ., ಅವನಿಗೆ ಒಬ್ಬ ಎಸ್.ಪಿ., ನಾಯಿಯ ಕೊರಳಿನಲ್ಲಿ ಕಟ್ಟಿ ಬಿಟ್ಟು ಬಿಡುವುದು; ನಾಯಿ ಬಂದ ಕೂಡಲೆ ಪೋಲೀಸ್ ಎಸ್.ಸಿ ಬಂದ, ಪೋಲೀಸ್ ಡಿ.ಐ.ಜಿ. ಬಂದ ಅಂತ ಮಾಡಿ. ಏಕೆಂದರೆ ನಾಯಿಗಳಿ ಕೆಲಸ ಮಾಡುತ್ತದೆ ಅಂದರೆ, ಆ ನಾಯಿಗಳಿಗೆ ಪ್ರಮೋರ್ಷನ್ ಕೊಡುವುದು ಸರಿ ಅನ್ನಿಸುತ್ತದೆ. ನಿಜವಾಗಿಯೂ ನಿಮ್ಮ ತನಿಖೆ ಬಹಳ ಫೇಲ್ಯೂರ್ ಆಗಿದೆ ಎಂದು ನಾನು ಕೇಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಈ ವಿಷಯವನ್ನು ಸರ್ಕಾರ ಹಗುರವಾಗಿ ಪರಿಗಣಿಸಿಲ್ಲ, ಗಂಭೀರವಾಗಿ ಪರಿಗಣಿಸಿದೆ. ಪೋಲೀಸ್ ನಾಯಿಗಳ ಬಗ್ಗೆ ಮಾನ್ಯ ಕೌಜಲಗಿಯವರು ಮಾತನಾಡಿದರು. ಅವರು ಮಾತನಾಡಿದಂತಹ ಮಾತು ಬಹಳ ಹಗುರವಾದಂತಹ ಮಾತು ಎಂದು ನನಗೆ ಅನ್ನಿಸುತ್ತದೆ. ಇದಕ್ಕೆ ವ್ಯಾಪಕವಾದಂತಹ ಹಿನ್ನೆಲೆ ಇದೆ. ಇದನ್ನು ಹೀಗೆ ಹೇಳುವುದು ಸರಿಯಲ್ಲ. ಸೆಕ್ಯುರಟಿ ಏಜನ್ಸಿನಿಂದ ಹೇಳುವುದು ಸರಿಯಲ್ಲ. ಬರೀ ಈ ರಾಜ್ಯದಲ್ಲಿಯೇ ಇದರ ಹಿನ್ನೆಲೆ ಇದೆ ಎಂದು ದಯವಿಟ್ಟು ತಾವು ತಿಳಿಯಬೇಡಿ. ಇದರ ಹಿನ್ನೆಲೆ ಇದರ ಕೈ ಬಹಳ ದೂರದವರೆಗೆ ವ್ಯಾಪಕವಾಗಿದೆ. ಆದ್ದರಿಂದಲೇ ಪೋಲೀಸ್ ಇಲಾಖೆಯವರು, ಇಂಟಲಿಜೆನ್ಸ್ ಇಲಾಖೆಯವರು ವ್ಯಾಪಕವಾದಂತಹ ತನಿಖೆ ಶುರುಮಾಡಿದ್ದಾರೆ, ಪ್ರತಿಯೊಂದು ಮನೆಯನ್ನು ಸರ್ಚ್ ಮಾಡುತ್ತಿದ್ದಾರೆ. ಇದೆಲ್ಲ ವಿವರಗಳನ್ನು ಕೊಡುವುದು ಸರಿಯಲ್ಲ. ನಾನು ಏತಕ್ಕೆ ಹೇಳಿದೆ ಅಂದರೆ, ಸರ್ಕಾರ ಇದರಲ್ಲಿ ನಿರ್ಧಾರ ಮಾಡಿದೆ. ಈ ಬಾಂಬ್‌ಗಳನ್ನು ಇಟ್ಟು ಸ್ಫೋಟ ಮಾಡತಕ್ಕದ್ದನ್ನು ಮೂಲೋತ್ಪಾಟನೆ ಮಾಡಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ. ಇದಕ್ಕೆ ಸರ್ಕಾರದ ಎಲ್ಲ ಏಜೆನ್ಸಿಗಳನ್ನು ಉಪಯೋಗಿಸಿಕೊಂಡು ಮಾಡುತ್ತೇವೆ. ಇಂಟಲ್‌ಜೆನ್ಸ್ ಏಜೆನ್ಸಿ, ಎನ್‌ಕ್ವೈರಿ ಏಜೆನ್ಸಿ, ಪೋಲೀಸಿನವರನ್ನು ಬಿಟ್ಟು ಏನು ಮಾಡುತ್ತೀರಿ. ಸರ್ಕಾರ ಅಂದರೆ ಸರ್ಕಾರದ ಪ್ರತಿಯೊಂದು ಅಂಗಗಳು ಇವು. ಅವರು ಬೇಕಾದಷ್ಟು ಕಷ್ಟ ನಷ್ಟಗಳನ್ನು ಅನುಭವಿಸಿ ಕೆಲಸವನ್ನು ಮಾಡುತ್ತಾರೆ. ತಪ್ಪು ಇರಬಹುದು. ಆದರೆ ಇರತಕ್ಕ ಮಿಷಿನರಿಯನ್ನು ನಾವು ಉಪಯೋಗಿಸಿಕೊಂಡು ನಮ್ಮ ಕೆಲಸಗಳನ್ನು ಮಾಡಬೇಕು. ಇದನ್ನು ಸರ್ಕಾರ ಮಾಡುತ್ತಿದೆ. ಆದರೆ ಸರ್ಕಾರದ ಗಮನಕ್ಕೆ ಬಂದಂತಹ ಇಲಾಖೆಯ, ಗಮನಕ್ಕೆ ಬಂದಂತಹ, 5TH

ಎಲ್ಲಾ ವಿಷಯಗಳನ್ನೂ ನಾವು ಬಹಿರಂಗ ಪಡಿಸುವುದಕ್ಕೆ ಸಾಧ್ಯವಿಲ್ಲ. ತಮಗೆ ಗೊತ್ತಿರುವ ಹಾಗೆ, ಕೇಂದ್ರ ಮಟ್ಟದಲ್ಲಿಯೂ ಕೆಲವು ಮಿಲಿಟರಿ ಅಂಶಗಳು ಪ್ರಧಾನಿಯವರಿಗೇ ತಲುಪಿರುವುದಿಲ್ಲ. ಆದ್ದರಿಂದ ಇಲ್ಲಿಯೂ ಕೂಡ ಈ ಸ್ಕ್ಯಾಟಜಿ ಏನಿದೆ, ಮಾನ್ಯ ವಾಟಾಳ್ ನಾಗರಾಜ್‌ರವರ ಮನಸ್ಸಿನಲ್ಲಿ ಏನಿದೆ, ಇಂತಹ ಘಟನೆಗಳು ಬೆಳಗಾವಿಯಲ್ಲಿ ಮೈಸೂರಿನಲ್ಲಿ ಹಾಗೂ ಬೇರೆ ಕಡೆಗಳಲ್ಲಿ ನಡೆದರೆ ಪ್ರಜೆಗಳು ನೆಮ್ಮದಿಯಾಗಿ ಇರುತ್ತಾರೆಯೇ ಎನ್ನುವ ಆತಂಕ ಜನಕ್ಕೆ ಬರುವುದು ಸಹಜ. ಜನಗಳಲ್ಲಿಯೂ ಆತಂಕ ಇದೆ. ಬಾಂಬ್ ಉಪಯೋಗಿಸುವುದು, ಬಾಂಬನ್ನು ಇಡತಕ್ಕಂಥ ಹಿನ್ನೆಲೆಯನ್ನು ಬಹಳ ಆಳವಾಗಿ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಇದರಲ್ಲಿ ನಡೆಯಬೇಕಾದ ಯಾವುದೇ ಕ್ರಮವನ್ನೂ ನಾವು ನಿಲ್ಲಿಸುವುದಿಲ್ಲ. ನಾನು ಓದಿದ್ದು ಕೇವಲ ಪೋಲೀಸ್ ವರದಿ ಎಂದು ದಯವಿಟ್ಟು ತಿಳಿದುಕೊಳ್ಳಬೇಡಿ. ಎಷ್ಟರಮಟ್ಟಿಗೆ ಹೇಳಬೇಕೋ ಅಷ್ಟನ್ನು ಮಾತ್ರ ನಾನು ಹೊರಗಡೆ ಹೇಳಿದ್ದೇನೆ. ಬಾಕಿ ವಿಷಯವನ್ನು ಹೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ಎಂ. ಪಿ. ವೆಂಕಟೇಶ್ : ನಾಲ್ಕಾಣೆಯನ್ನು ಕೊಟ್ಟರೆ ಬೊಂಬಾಯಿ ನೋಡು, ದಿಲ್ಲಿ ನೋಡು ಅಂತ ದುರ್ಬೀನಿನಲ್ಲಿ ತೋರಿಸುತ್ತಾರೆ. ಮಕ್ಕಳ ಆಟ ಹಾಗೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಸಚಿವರು:...

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಕೆಲವು ವಿಷಯ ಮಾನ್ಯ ದೇಶಪಾಂಡೆಯವರಿಗೆ ಗೊತ್ತಿದೆ. ನಮಗೆ ಗೊತ್ತಿದ್ದರೂ ಹೇಳುವುದಕ್ಕೆ ಅವಕಾಶ ಇಲ್ಲ. ಅದರ ಹಿನ್ನೆಲೆಯನ್ನು ನಾವು ಹೇಳುವುದಕ್ಕೆ ಅವಕಾಶ ಇಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಮಾನ್ಯ ಸಚಿವರು ಹೇಳಿದ್ದಕ್ಕೆ ನನ್ನ ಬಿನ್ನಾಭಿಪ್ರಾಯ ಇಲ್ಲ. ರಕ್ಷಣಾ ಹಿತದೃಷ್ಟಿಯಿಂದ ನೀವು ಎಲ್ಲ ವಿಷಯವನ್ನು ನಮಗೆ ಹೇಳಿ ಎಂದು ನಾವು ಕೇಳುತ್ತಿಲ್ಲ. ಇದುವರೆಗೂ ಪ್ರತಿದಿನ ನಡೆಯುತ್ತಿರುವ ಬಾಂಬ್ ಸ್ಫೋಟದ ಬಗ್ಗೆ, ನಿಮ್ಮ ಪೋಲೀಸ್ ಇಲಾಖೆಯವರು ಇಂಟಲಿಜೆನ್ಸ್‌ರವರು ಏನು ಮಾಡಿದ್ದಾರೆ ಇದನ್ನು ಪತ್ತೆ ಹಚ್ಚಿದ್ದಾರೋ ಇಲ್ಲವೋ ಹೇಗೆ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಪತ್ತೆ ಹಚ್ಚುವುದಕ್ಕೆ ಎಲ್ಲ ಪ್ರಯತ್ನಗಳನ್ನು ಮಾಡಿದ್ದೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ನಿಷ್ಕ್ರಿಯರಾಗಿದ್ದರೋ ಏನೋ ಅನ್ನುವುದು ಬೇಕು. ಎಲ್ಲ ವಿಚಾರಗಳನ್ನು ಬಹಿರಂಗಪಡಿಸಿ ಎಂದು ನಾವು ಹೇಳುವುದಿಲ್ಲ. ಜನತೆಗೆ ವಿಶ್ವಾಸ ಬರುವ ರೀತಿಯಲ್ಲಿ ತನಿಖೆ ಮಾಡಬೇಕಾಗುತ್ತದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಬನ್ನಿಕೋಡ್‌ರವರಿಗೆ, ನಾನು ಭರವಸೆಯನ್ನು ಕೊಡುತ್ತೇನೆ. ಹಗಲು ರಾತ್ರಿ ಪೋಲೀಸಿನವರು ಕಣ್ಣಿಗೆ ನಿದ್ದೆ ಇಲ್ಲದೆ ಈ ಕೆಲಸದ ತನಿಖೆಯನ್ನು ನಡೆಸಿದ್ದಾರೆ. ಏಕೆಂದರೆ ಇದರಲ್ಲಿ ಏನಾದರೂ ವ್ಯತ್ಯಾಸವಾದರೆ ಇಡೀ ಇಲಾಖೆಗೆ ಕೆಟ್ಟ ಹೆಸರು ಬರುತ್ತದೆ, ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ತಮ್ಮ ಮನಸ್ಸಿನಲ್ಲಿ ಎಷ್ಟು ತೀವ್ರತೆ ಇದೆಯೋ ಅದಕ್ಕಿಂತ ಹೆಚ್ಚಿನ ತೀವ್ರತೆ ಆತಂಕ ಸರ್ಕಾರದ ಮನಸ್ಸಿನಲ್ಲಿದೆ. ಇದನ್ನು ಮೂಲೋತ್ಪಾಟನೆ ಮಾಡೇ ಮಾಡುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ : ತಾವು ಬಹಿರಂಗವಾಗಿ ಎಲ್ಲ ವಿಚಾರಗಳನ್ನು ಹೇಳಲಿಕ್ಕೆ ಬರುವುದಿಲ್ಲ, ಅದನ್ನು ನಾನು ಒಪ್ಪಿಕೊಳುತ್ತೇನೆ, ಹೇಳಲೂ ಬಾರದು. ಆದರೆ ಇವತ್ತು ಇದು ಮೊದಲನೆಯ ಬಾಂಬ್ ಸ್ಫೋಟ ಅಲ್ಲ, ಈ ರೀತಿ 5-6 ಸಲ ಆಗಿದೆ. ಬೆಳಗಾಂನಲ್ಲಿ ಆಗಿದೆ, ಚಿಕ್ಕಮಗಳೂರಿನಲ್ಲಿ ಆಗಿದೆ. ಮಹಾರಾಷ್ಟ್ರದಲ್ಲಿರುವ ಮುಖ್ಯಮಂತ್ರಿಗೆ ಧೈರ್ಯ ಹೇಗೆ ಬಂತು. ಆ ಮುಖ್ಯಮಂತ್ರಿಯವರು ಸ್ಪಷ್ಟವಾಗಿ ಇದರಲ್ಲಿ ಪಾಕಿಸ್ತಾನದ ಕೈವಾಡ ಇದೆ ಎಂದು ಹೇಳಿದರು. ಇಂತಹವರನ್ನು ಅರೆಸ್ಟ್ ಮಾಡಿದ್ದೇವೆಂದು ಹೇಳಿದರು. ಆದರೆ ನೀವು ಒಬ್ಬರನ್ನೂ ಅರೆಸ್ಟ್ ಮಾಡಿಲ್ಲ. ನಮ್ಮ ನಾಯಿಗಳು ಕೆಲಸ ಮಾಡುತ್ತಿವೆ, ನಮ್ಮ ಪೋಲೀಸಿನವರು ಕೆಲಸ ಮಾಡುತ್ತಿದ್ದಾರೆಂದು ಹೇಳುತ್ತಿದ್ದೀರಿ; ಸರ್ಕಾರ ಇದರಲ್ಲಿ ಜನರಿಗೆ ವಿಶ್ವಾಸವನ್ನು ಕೊಡಲಿಕ್ಕೆ, ಸಂರಕ್ಷಣೆಯನ್ನು ಕೊಡಲಿಕ್ಕೆ ಸಂಪೂರ್ಣವಾಗಿ ವಿಫಲವಾಗಿದೆ, ಸರ್ಕಾರ ಸಂಪೂರ್ಣವಾಗಿ ನಿಷ್ಕ್ರಿಯವಾಗಿದೆ. ಈ ಸರ್ಕಾರದಿಂದ ಯಾವ ತರಹದ ಸಂರಕ್ಷಣೆಯನ್ನು ನಾಡಿನ ಜನರಿಗೆ ಕೊಡುವುದಕ್ಕಾಗುವುದಿಲ್ಲ. ಈ ಬಾಂಬ್ ಡಿಟೆಕ್ಷನ್ ಏನಿದೆ ಅದರಲ್ಲಿ ತಾವು ಟೋಟಲ್ ಫೇಲ್ಯೂರ್ ಆಗಿದ್ದೀರಿ, ಹಾಗಾಗಿ in protest of this we are walking out.

(ಮಾನ್ಯ ಎಸ್. ಹೆಚ್. ಕೌಜಲಗಿಯವರು, ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ಆರ್. ವಿ. ದೇಶಪಾಂಡೆಯವರು ಮತ್ತು ಮಾನ್ಯ ಹೆಚ್. ಏಕಾಂತಯ್ಯನವರು ಈ ಹಂತದಲ್ಲಿ ಸದನದಿಂದ ಹೊರಗೆ ಹೋದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಂಸದೀಯ ಸಚಿವರಲ್ಲಿ ನಾನು ಮನವಿಯನ್ನು ಮಾಡುತ್ತಿದ್ದೇನೆ. ತಮ್ಮ ಹೃದಯವನ್ನು ಮುಟ್ಟಿ ತಾವು ಈಗ ಕೊಟ್ಟಿರತಕ್ಕಂಥ ಹೇಳಿಕೆ ಜವಾಬ್ದಾರಿಯಿಂದ ಕೊಟ್ಟಿರತಕ್ಕಂಥ ಹೇಳಿಕೆಯೇ ಎಂದು ಹೇಳಿ ಏತಕ್ಕೆ ಮುಚ್ಚಿಡುತ್ತಿದ್ದೀರಿ. ಇದರಲ್ಲಿ ಯಾರ್ಯಾರು ಇದ್ದಾರೆ. ಎಲ್ಲಿದ್ದಾರೆ ಎಂಬುದನ್ನೆಲ್ಲಾ ಏತಕ್ಕೆ ತಾವು ಮುಚ್ಚಿಡುತ್ತಿದ್ದೀರಿ. ಮುಚ್ಚಿಡುವ ಉದ್ದೇಶ ಏನಿದೆ. ಸರ್ಕಾರ ಸಂಪೂರ್ಣ ವಿಫಲವಾಗಿದೆ. ಯಾರಿಗೋ ರಕ್ಷಣೆಯನ್ನು ಕೊಡುವುದಕ್ಕೆ ಹೊರಟಿದ್ದೀರಿ ಎನ್ನತಕ್ಕದ್ದನ್ನು ನಾನು ಹೇಳುತ್ತಿದ್ದೇನೆ. ನಿಜವಾಗಿಯೂ ನೀವು ಈ ರಾಜ್ಯದಲ್ಲಿ ರಕ್ಷಣೆಯನ್ನು ಕೊಡುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ಪ್ರತಿ ದಿನ ಮೈಸೂರಿನಲ್ಲಿ ಬಾಂಬ್ ಸಿಡಿಯುತ್ತಿದೆ, ಬೆಳಗಾಂನಲ್ಲಿ ಸಿಡಿಯುತ್ತಿದೆ. ಬೆಂಗಳೂರಿನಲ್ಲಿ ಅನೇಕ ಕಡೆ ಭಯೋತ್ಪಾದಕರು ಬಂದಿದ್ದಾರೆ. ಸರ್ಕಾರದ ಮೂಲಕ ನೀವು ಏನು ಮಾಡಿದ್ದೀರಿ? ಖಂಡಿತವಾಗಿ ಸರ್ಕಾರ ವಿಫಲವಾಗಿದೆ. ಬರೀ ಹೇಳಿಕೆಯನ್ನು ಕೊಡುವುದರಲ್ಲಿ ಏನೂ ಆಗುವುದಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಸಂಶಯವನ್ನು ಪಡಬೇಡಿ. Security is one of the reasons.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದಿಂದ ರಕ್ಷಣೆಯನ್ನು ಕೊಡಿ ಎಂದು ಹೇಳಿದರೆ, ಯಾವುದೋ ನಾಯಿಗಳನ್ನು ಬಿಟ್ಟು ಊರೆಲ್ಲ ನೋಡಿಸುತ್ತಿದ್ದೀರಿ, ಏನು ಪರಿಸ್ಥಿತಿ ಇವರ ಕೈಯಲ್ಲಿ ಇರತಕ್ಕಂಥದ್ದು. ಇದು ಸರಿಯಲ್ಲ. ನಿಮ್ಮ ಸರ್ಕಾರದ ಬೇಜವಾಬ್ದಾರಿತನವನ್ನು ನೋಡಿ ನಾನು ಧರಣಾ ಮಾಡುತ್ತಿದ್ದೇನೆ. ಇದು ಸರಿಯಲ್ಲ. ಇದು ಒಳ್ಳೆಯದಲ್ಲ. ನಿಮಗೆ ನಾವು ಎಷ್ಟು ಸಾರಿ ಹೇಳಬೇಕು, ನಾವು ಹೇಳಿದ್ದು ಆಯಿತು, 5TH

ಕೇಳಿದ್ದು ಆಯಿತು, ರಕ್ಷಣೆಯನ್ನು ಕೊಡುವ ಬಗ್ಗೆ ಯಾವುದೇ ನೀತಿ ಇಲ್ಲ, ಜನರಿಗೆ ರಕ್ಷಣೆಯನ್ನು ಕೊಡುವುದರಲ್ಲಿ ನೀವು ವಿಫಲರಾಗಿದ್ದೀರಿ, ಇದರಲ್ಲಿ ಮುಚ್ಚಿಡತಕ್ಕಂಥದ್ದು ಏನಿದೆ. ಏತಕ್ಕೆ ಮುಚ್ಚಿಡಬೇಕು?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ರಾಜ್ಯದ ಹಿತದೃಷ್ಟಿಯಿಂದ, ಸೆಕ್ಯೂರಿಟಿ ದೃಷ್ಟಿಯಿಂದ ಎಷ್ಟು ಹೇಳಬೇಕೋ ಅಷ್ಟನ್ನು ಮಾತ್ರ ಹೇಳುತ್ತೇವೆ.

ಶ್ರೀ ಕೆ. ಎಸ್. ಈಶ್ವರಪ್ಪ : ವಿದೇಶಿ ಶಕ್ತಿ ಕೈವಾಡ ಇದೆಯೇ? ಪಾಕಿಸ್ತಾನದ ಕೈವಾಡ ಇದೆಯೇ? ಈ ರಾಜ್ಯದಲ್ಲಿ ಏನು ನಡೆಯುತ್ತಿದೆ? ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಸಮಯ ಬಂದಾಗ ಹೇಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ, ಇನ್ನೂ ಎಷ್ಟು ಜನ ಇಲ್ಲಿ ಸಾಯಬೇಕೆಂದು ಅಂದುಕೊಂಡಿದ್ದೀರಿ. ಸ್ವಾಮಿ, ಜನ ಸತ್ತ ಮೇಲೆ ಹೇಳುತ್ತೀರ? ವಿದೇಶಿ ಶಕ್ತಿಗಳ ಕೈವಾಡ ಇದೆಯೇ, ರಾಷ್ಟ್ರದ್ರೋಹಿಗಳ ಕೈವಾಡ ಇದೆಯೇ? ಇದನ್ನು ತಾವು ಹೇಳಬೇಕಾಗುತ್ತದೆ.

ಅಧ್ಯಕ್ಷರು : ಈಗ ಸಭೆಯ ಕಲಾಪಗಳನ್ನು ಮಂದೂಡಿ ನಾಳೆ ಬೆಳಿಗ್ಗೆ ಮತ್ತೆ 11.00 ಘಂಟೆಗೆ ಸಭೆ ಸೇರುತ್ತದೆ.

(ಸದನವು 6 ಘಂಟೆ 47 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 6ನೇ ಏಪ್ರಿಲ್ ಮಾಹೆ 1993ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

(* ಈ ಚಿಪ್ಪೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಿರುತ್ತಾರೆ)

ಕರ್ನಾಟಕ ವಿಧಾನಸಭೆ

ಒಂಭತ್ತನೆಯ ವಿಧಾನಸಭೆ

(ಒಂಭತ್ತನೆಯ ಅಧಿವೇಶನ)

ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲೂಕು ಪಂಚಾಯತಿ ಸವಿಂತಿಗಳ, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ) ವಿಧೇಯಕ, 1993.

(1993ರ ವಿಧಾನಸಭಾ ವಿದೇಯಕ ಸಂಖ್ಯೆ : 13)

1983ರ ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕು ಪಂಚಾಯತಿ ಸಮಿತಿಗಳ, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮವನ್ನು, ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಕರ್ನಾಟಕ ಜಿಲ್ಲಾ ಪರಿಷತ್ತುಗಳ ತಾಲ್ಲೂಕು ಪಂಚಾಯತಿ ಸಮಿತಿಗಳ, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮ, 1993ನ್ನು (1985ರ ಕರ್ನಾಟಕ ಅಧಿನಿಯಮ ಸಂಖ್ಯೆ 20) ಈ ಮುಂದೆ ತಿಳಿಸಿರುವ ಉದ್ದೇಶಗಳಿಗಾಗಿ ಇನ್ನಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ.

ಇದು ಭಾರತ ಗಣರಾಜ್ಯದ ನಲವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ :-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ : (1) ಈ ಅಧಿನಿಯಮವನ್ನು ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕು ಪಂಚಾಯತಿ ಸಮಿತಿಗಳ, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ) ಅಧಿನಿಯಮ 1993 ಎಂದು ಕರೆಯತಕ್ಕದ್ದು.

(2) ಇದು 1993ನೇ ಜನವರಿ ಇಪ್ಪತ್ತೈದನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗುವುದು ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕು ಪಂಚಾಯತಿ ಸಮಿತಿಗಳ, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮ, 1983ರ (1985ರ ಕರ್ನಾಟಕ ಅಧಿನಿಯಮ ಸಂಖ್ಯೆ 20) 8ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ :

ಅ) " ಒಂದು ವರ್ಷಕ್ಕೆ ಮೀರದಂತೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು

ಆ) ಈ ಮುಂದಿನದನ್ನು ಕೊನೆಯಲ್ಲಿ ಸೇರಿಸತಕ್ಕದ್ದು ಎಂದರೆ :

ಡೆಪ್ಯುಟಿ ಕಮಿಷನರನು ಅಂಥದೆ ಅಧಿಸೂಚನೆಯ ಮೂಲಕ ಅಂತಹ ನೇಮಕಾತಿಯ ಅವಧಿಯನ್ನು ಮೊಟಕುಗೊಳಿಸಬಹುದು ಅಥವಾ ವಿಸ್ತರಿಸಬಹುದು.